ಆತನನ್ನು ಸಂಪೂರ್ಣವಾಗಿ ಆವರಿಸಿಕೊಂಡ ಈ ವಿಚಾರ ಉಳಿದ ಬಯಕೆಗಳನ್ನು ಹಾಗೂ ಆಸೆಗಳನ್ನು ನುಂಗಿಹಾಕಿತು. ಈ ಅಲೆಮಾರಿ ಯಾತ್ರಿಕನಿಗೆ ಯಾವುದೊ ಒಂದು ಮೂಲೆಯಲ್ಲಿರುವ ಪ್ರಶಾಂತವಾದ ಸ್ಥಳ ಬೇಕಿತ್ತು. ಅದಕ್ಕಿಂತ ಅಮೂಲ್ಯವಾದುದರ ಬಗ್ಗೆ ಆತ ಕಲ್ಪನೆ ಕೂಡ ಮಾಡಲಾರ. ಅಂಥ ಆ ಕೊನೆಯ ಗುರಿ ತಲುಪಲು ಅವನು ಮೌನವಾಗಿ ಕಾಯುತ್ತಿದ್ದ. ಯಾಕೆಂದರೆ ಭೂಜಲ ಮಾರ್ಗದ ಯಾತ್ರೆಗುಂಟ ದೈವದ ಹುಚ್ಚಾಟಿಕೆ ಎಷ್ಟಿತ್ತೆಂದರೆ, ಒಂದಿಷ್ಟು ಉಸಿರು ಎಳೆದುಕೊಳ್ಳಲು ಕೂಡ ಅದು ಆತನನ್ನು ಬಿಡುತ್ತಿರಲಿಲ್ಲ. ಆತನ ಕಲ್ಪನೆಯ ಬದುಕು ಹಾಗೂ ಪರಮ ಸಂತಸ ಯಾವುದೆಂದರೆ ಅಲೆದಾಟದಿಂದ ಮುಕ್ತವಾಗುವುದು. ನಿಜಕ್ಕೂ, ಅಂಥ ನಿರಾಳ ಸಂತಸ ಆತನಿಗೆ ಬೇಕಿತ್ತು. ಆದರೆ, ನಿರಾಸೆಗಳಿಗೆ ಅವನು ಅದೆಷ್ಟು ಹೊಂದಿಕೊಂಡಿದ್ದನೆಂದರೆ, ಎಂದಿಗೂ ಕೈಗೆಟುಕದ ಏನನ್ನೋ ಬಯಸುವವರಂತೆ ಆತನ ವಿಶ್ರಾಂತಿಯ ಬಯಕೆಯಾಗಿತ್ತು. ಆದರೆ, ಅದನ್ನು ಬಯಸುವ ಧೈರ್ಯ ಕೂಡ ಆತ ಮಾಡಲಿಲ್ಲ. ಏತನ್ಮಧ್ಯೆ ಅನಿರೀಕ್ಷಿತವಾಗಿ, ಆ ಹನ್ನೆರಡು ಗಂಟೆಗಳ ಅವಧಿಯಲ್ಲಿ, ಇಡೀ ಜಗತ್ತಿನಲ್ಲಿ ತನಗಾಗಿ ಮಾತ್ರ ಮೀಸಲಾಗಿಟ್ಟಂತಿರುವ ದೀಪಗೃಹ ಸಂಚಾಲಕ ಹುದ್ದೆಯನ್ನು ಆತ ಗಿಟ್ಟಿಸಿಕೊಂಡಿದ್ದ. ಆ ದಿನ ಸಂಜೆ ಆತ ಲಾಟೀನು ಹೊತ್ತಿಸುತ್ತಿರುವಾಗ ಮಂಕುಕವಿದಂತಾಗಿ, ಇದೆಲ್ಲ ನಿಜವೆ ಎಂದು ತನ್ನನ್ನೇ ಪ್ರಶ್ನಿಸಿಕೊಂಡ. ಹೌದು, ಇದೆಲ್ಲ ನಿಜ ಎಂದು ಉತ್ತರಿಸುವ ಧೈರ್ಯ ಕೂಡ ಬಾರದಂತಿರುವ ಇದ್ದ ಆತನ ಸ್ಥಿತಿಗೆ ಯಾರೂ ಅಚ್ಚರಿಪಡಬೇಕಾಗಿಲ್ಲ. ಅದೇ ಕಾಲಕ್ಕೆ, ಆ ಕ್ಷಣದ ವಾಸ್ತವವು ನಿರಾಕರಿಸಲಾಗದ, ಪುರಾವೆಗಳನ್ನು ಮುಂದಿರಿಸಿ, ವಸ್ತುಸ್ಥಿತಿಯನ್ನು ಆತನಿಗೆ ಮನಗಾಣಿಸಿತು. ಆದ್ದರಿಂದ ಆತ ಬಾಲ್ಕನಿಯಲ್ಲಿದ್ದಾಗ, ಗಂಟೆಗಳು ಒಂದರ ನಂತರ ಒಂದು ಉರುಳಿ ಹೋದವು. ಆತ, ಸುತ್ತೆಲ್ಲ ದಿಟ್ಟಿಸಿ ನೋಡಿ ತನಗೆ ತಾನೆ ಎಲ್ಲವನ್ನೂ ಖಾತ್ರಿಪಡಿಸಿಕೊಂಡ. ತನ್ನ, ಜೀವಮಾನದಲ್ಲೇ ಮೊದಲ ಬಾರಿಗೆ ಸಮುದ್ರವನ್ನು ನೋಡುತ್ತಿದ್ದೇನೆ ಎಂದೆನಿಸಿತು ಆತನಿಗೆ. ಲಾಟೀನಿನ ಗಾಜು ಕತ್ತಲಲ್ಲಿ ಮಿತಿಮೀರಿದ ತ್ರಿಕೋನಾಕಾರದ ಬೆಳಕನ್ನು ಹರಡಿತ್ತು. ಅದರಾಚೆ, ಬಹುದೂರ ಸಂಪೂರ್ಣವಾಗಿ ಹಬ್ಬಿಕೊಂಡಿರುವ ನಿಗೂಢ ಹಾಗೂ ಭಯಂಕರ ಕತ್ತಲೊಳಗೆ, ಆ ವೃದ್ಧನ ದೃಷ್ಟಿ ಬೆರೆತು ಹೋಯಿತು. ಆದರೆ, ಆ ದೂರವು ಬೆಳಕಿನತ್ತ ಓಡಿ ಬರುವಂತೆ ತೋರಿತು. ಉದ್ದವಾದ ಅಲೆಗಳು ಆ ಕತ್ತಲೆಯಿಂದೀಚೆ, ಸುರುಳಿ ಸುರುಳಿಯಾಗಿ ಒಂದರ ಹಿಂದೆ ಇನ್ನೊಂದು ಆರ್ಭಟಿಸುತ್ತ ಬಂದು, ಆ ದ್ವೀಪದ ತಳಕ್ಕೆ ಅಪ್ಪಳಿಸುತ್ತಿದ್ದವು. ಅಲೆಗಳ ನೊರೆನೊರೆಯಾದ ಬೆನ್ನುಗಳು ಲಾಟೀನಿನ ಬೆಳಕಿನಲ್ಲಿ ಗುಲಾಬಿ ಬಣ್ಣ ಪಡೆದು ಹೊಳೆಯುತ್ತಿದ್ದವು. ದಂಡೆಯ ಕಡೆಗೆ ಸಾಗಿ ಬರುತ್ತಿದ್ದ ಉಬ್ಬರದ ಅಲೆಗಳು ಇನ್ನಷ್ಟು ಉಬ್ಬುತ್ತ ಅಲ್ಲಿದ್ದ ಉಸುಕಿನ ಕಟ್ಟೆಗಳನ್ನು ಮುಚ್ಚಿಬಿಟ್ಟವು. ಒಮ್ಮೆ ಫಿರಂಗಿಯಿಂದ ಹೊರಡುವ ಗುಡುಗಿನ ಸದ್ದಿನಂತೆ ಇನ್ನೊಮ್ಮೆ ಬೃಹತ್ ಕಾಡುಗಳ ಗರ್ಜನೆಯಂತೆ ಮತ್ತೊಮ್ಮೆ ದೂರದಿಂದ ಕೇಳಿ ಬರುವ ಜನರ ಪಿಸುಗುಡುವ ದನಿಯಂತೆ ರೌದ್ರಮಯ ಸಮುದ್ರದ ಮಾತು ಕೇಳಿಬರುತ್ತಿತ್ತು. ಒಮ್ಮೊಮ್ಮೆ ಅದು ಪ್ರಶಾಂತವಾಗಿರುತ್ತಿತ್ತು. ಆಗ ಆ ವೃದ್ಧನ ಕಿವಿಗಳಿಗೆ ಒಮ್ಮೆ ಎಂಥದೊ ನಿಡಿದಾದ ನಿಟ್ಟುಸಿರು, ಇನ್ನೊಮ್ಮೆ ಒಂದು ಬಗೆಯ ಬಿಕ್ಕಳಿಕೆ ಮತ್ತೊಮೆ ಭಯಭೀತಗೊಳಿಸುವ ಗರ್ಜನೆ ಕೇಳಿಬರುತ್ತಿತ್ತು. ಕೊನೆಗೆ ಮನಸ್ಸನ್ನು ಆವರಿಸಿದ ಆ ಗಳಿಗೆಯ ಮಂಕನ್ನು ಗಾಳಿ ದೂರ ತಳ್ಳಿತು. ಆದರೆ, ಅದೇ ಗಾಳಿ ಶಿಥಿಲವಾದ ಕಪ್ಪು ಮೋಡಗಳನ್ನು ಜೊತೆಗೆ ಕರೆತಂದಿತು. ಅವು ಚಂದ್ರನನ್ನು ಮುಚ್ಚಿಬಿಟ್ಟವು. ಪಶ್ಚಿಮದ ಕಡೆಯಿಂದ ಆ ಗಾಳಿ ಜೋರಾಗಿ ಬೀಸತೊಡಗಿತು. ಅಲೆಗಳು ಅಬ್ಬರದಿಂದ ಮೇಲೆದ್ದು ದೀಪಗೃಹದ ಬಂಡೆಗಲ್ಲುಗಳಿಗೆ